2) ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997

(ಮಾನ್ಯ ಸದಸ್ಯರಾದ ಶ್ರೀ ಜಿ.ಪಿ. ಶ್ರೀರಾಮ ರೆಡ್ಡಿಯವರು ಸಭಾತ್ಯಾಗ ಮಾಡಿದರು.)

(ಮಾನ್ಯ ಸದಸ್ಯರಾದ ಶ್ರೀವಾಟಾಳ್‌ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

(ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಜವಾಬ್ದಾರಿ ಉತ್ತರ ದೊರಕಲಿಲ್ಲ ಎಂದು ಮಾನ್ಯ ರೈತರ ಸಂಘ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಮೀಟರ್ ವಿಚಾರ ಏನು ಇದೆಯಲ್ಲಾ, ಮೀಟರ್ ಹಾಕುವುದರಿಂದ ರೈತರಿಗೆ ತೊಂದರೆ ಆಗುತ್ತದೆ ಎನ್ನತಕ್ಕ ಪ್ರಸ್ತಾವನೆಯನ್ನು ಮಾಡಿದಮೇಲೆ, ಕೂಡ ಪುನಃ ನಾವು ಅದನ್ನೇ ಮಾಡುತ್ತೇವೆ ಎಂದರೆ ಹೇಗೆ? ತಾವು ಏನು ಹೇಳಿದಿರಿ ಅಂದರೆ ಮೀಟರ್ ಅಳವಡಿಸಿದ ಮೇಲೆ ಮೂರು ಕಂತಿನಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಿರಿ. 960 ರೂಪಾಯಿ ಈಗ ತೆಗೆದುಕೊಳ್ಳುವುದಿಲ್ಲ, ಅದನ್ನೂ ತೆಗೆದು ಹಾಕಿದ್ದೇವೆ ಎನ್ನತಕ್ಕದ್ದು. ಮತ್ತು ಯಾವುದು ವರ್ಕ್ ಆರ್ಡರ್ ಇಶ್ಯೂ ಮಾಡಿದ್ದೇವೆ. ಅದಕ್ಕಂತೂ ನಾವು ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಆದರೆ ಈಗ ನೋಟೀಸ್ ಸಮಗೂ ಕೂಡ ಬಂದು ಕೊಟ್ಟಿರಬಹುದು. ಪೆನಾಲ್ಟಿ ಕಡಿಮೆ ಆದರೂ ಸಹ ಎಲ್ಲಕ್ಕೂ ಕೂಡ ಪೆನಾಲ್ಟಿ ಎಂದು ಟ್ರೀಟ್ ಮಾಡುತ್ತಿದ್ದಾರೆ. ತಾವು ಹೇಳುವುದು ಒಂದು, ಆದೇಶ ಕೊಡುವುದು ಒಂದು ಆಗಿದೆ.

ಅಧ್ಯಕ್ಷರು : ಬೆಳಿಗ್ಗೆ ಮಾನ್ಯ ದರ್ಶನಾಪುರ ಅವರು ಏನು ಹೇಳಿದರು ಎಂದರೆ ಕಮ್ಯುನಿಕೇಶನ್ ಗ್ಯಾಪ್‌ನಿಂದ ಅಲ್ಲಿ ಯಾವುದಾದರೂ ಆ ಭಾಗದಲ್ಲಿ ಆ ರೀತಿ ಆಗಿರುತ್ತದೆ ಎಂದು ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೇಳಿದರು. ಆದರೆ ಇವರು ಪುನಃ ಈಗ ಪ್ರಸ್ತಾಪ ಮಾಡಿದರು. ನಾವು ಮೀಟರ್ ಹಾಕಲೇಬೇಕಾಗುತ್ತದೆ. ಎಷ್ಟು ಕನ್‌ಸ್ಯೂಮ್ ಮಾಡುತ್ತಾರೆಂದು ತಿಳಿದುಕೊಳ್ಳಲು ಹಾಕುತ್ತೇವೆ ಎಂದರು. ಇವರು ಮೀಟರ್ ಹಾಕುತ್ತೇವೆ ಎಂದಾಗ ಅವರು ಅಡ್ವಾನ್ಸ್‌ನಲ್ಲಿ ದುಡ್ಡನ್ನು ವಸೂಲು ಮಾಡುತ್ತಿದ್ದಾರೆ. ಮೀಟರ್ ಹಾಕುವುದು ಮುಂದೆ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಮೀಟರ್ ಹಾಕಿದ ಮೇಲೆ ದುಡ್ಡು ತೆಗೆದುಕೊಳ್ಳುತ್ತೇವೆ ಎನ್ನತಕ್ಕವರು, ಮೊದಲೇ ದುಡ್ಡು ವಸೂಲಿ ಮಾಡುತ್ತೇವೆ ಎಂದರೆ ಇದೊಂದು ಡ್ಯುಯಲ್ ಪಾಲಿಸಿ ಎರಡನೆಯದು ನಾನೊಂದು ಕ್ಲಾರಿಫಿಕೇಶನ್ ಕೇಳಿದೆ, ಅದಕ್ಕೆ ಉತ್ತರ ಹೇಳಲಿಲ್ಲ.

ಅಧ್ಯಕ್ಷರು : ಮೋಷನ್ ಮೂವ್ ಆಯಿತಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 118 ಕೋಟಿ ರೂಪಾಯಿ ಬಗ್ಗೆ ಹೇಳಲಿಲ್ಲ. ಈ ಎಕ್ಸೈಸ್ ರೂಲ್ ವಿತ್ ಡ್ರಾ ಮಾಡುವ ಬಗ್ಗೆನೂ ಹೇಳಲಿಲ್ಲ. ಅದಕ್ಕಾಗಿ ನಮ್ಮ ಇನ್ನೊಂದು ವಿಚಾರ ಇದೆ.